<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ಮಂಗಳೂರು, ದ.ಕ.</u>
ದಿಃ 07.12.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯ ಹಾಗೂ ಅದರಲ್ಲಿರುವ ರುಜು ನನ್ನದು.

<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರವಾಗಿ ಶ್ರೀ ವಿ.ಆರ್.ಬಿ ವಕೀಲರಿಂದ,</u>

1. ಯಮುನಾ ರವರ ಮರಣ ಪ್ರಮಾಣ ಪತ್ರವನ್ನು ನಿಪಿ-1 ಎಂದು,
2. ತಿಮ್ಮಪ್ಪ ರವರ ಮರಣ ಪ್ರಮಾಣ ಪತ್ರವನ್ನು ನಿಪಿ-2 ಎಂದು,
3. ತಿಮ್ಮಪ್ಪ ರವರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರವನ್ನು ನಿಪಿ-3 ಎಂದು,
4. 1 ರಿಂದ 6 ನೇ ಅರ್ಜಿದಾರರುಗಳ ಆಧಾರ್ ಕಾರ್ಡಿನ ನೋಟರೀಕೃತ ಪ್ರತಿಗಳಳನ್ನು ನಿಪಿ-4 ರಿಂದ ನಿಪಿ.9 ಎಂದು,
5. ದಿನಾಂಕ 22.10.2022 ರ ಕನ್ನಡ ಪ್ರಭಾ ಕನ್ನಡ ದಿನ ಪತ್ರಿಕೆಯನ್ನು ನಿಪಿ-10 ಎಂದು, ಸದರಿ ಪತ್ರಿಕೆಯಲ್ಲಿ ಹೊರಡಿಸಲಾಗಿರುವ ಪ್ರಕಟಣೆಯ ಭಾಗವನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

(ಮೂಲ ದಾಖಲೆಗಳೊಂದಿಗೆ ನೋಟರಿ ಪ್ರತಿಗಳನ್ನು ತಾಳೆ ಹಾಕಿ ನೋಡಿ ನಂತರ ಮೂಲ ದಾಖಲೆಗಳನ್ನು ಸಾಕ್ಷಿದಾರರಿಗೆ ಹಿಂದುರುಗಿಸಲಾಯಿತು)

<u>ಪಾಟೀ ಸವಾಲುಃ</u> ಎದುರುದಾರರು ಯಾರೂ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ನನ್ನ ಹೇಳಿಕೆ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ.,
ಮಂಗಳೂರು.